ತರಗತಿ: ೧೦ನೇ

# ಮೂರನೆಯ ಸಾಧನಾ ಪರೀಕ್ಷೆ

ಗರಿಷ್ಠ ಅಂಕಗಳು–೨೦

ವಿಷಯ: ಪ್ರಥಮ ಭಾಷೆ ಕನ್ನಡ

ಸಮಯ: ೪೦ ನಿಮಿಷ

**೧. ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರ ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.** **೧ X ೧ = ೧**

೧. ತತ್ಪುರುಷ ಸಮಾಸಕ್ಕೆ ಉದಾಹರಣೆ ;

(ಎ) ದೈವಭಕ್ತಿ (ಬಿ) ಹಿಂದಲೆ (ಸಿ) ಬಿಲ್ಗೊಂಡು (ಡಿ) ಧನುಜರಿಪು

**೨. ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದ ಬರೆಯಿರಿ.** **೧ X ೧ = ೧**

೨. ಬಳೆಗಾರ : ತದ್ಧಿತಾಂತ ನಾಮ : : ಚೆಲುವಿಕೆ : ______________

**೩. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **೧ X ೩ = ೩**

೩. ಶಿವಚರಿತ್ರೆಯಲ್ಲಿ ಯಾವ ಉಲ್ಲೇಖ ಮಾಡಲಾಗಿದೆ ?

೪. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ ?

೫. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು ?

**೪. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **೨ X ೧ = ೨**

೬. ಅ) ಜನರು ಮೂರ್ತಿಪೂಜೆ ಮಾಡಲು ಕಾರಣವೇನು ?

ಆ) ಯಾವ ವ್ಯಕ್ತಿಯನ್ನು ಆದರ್ಶವಾಗಿ ಸ್ವೀಕರಿಸಬೇಕು ?

**೫. ಈ ಕೆಳಗಿನ ಹೇಳಿಕೆಗಳಲ್ಲಿ ಒಂದಕ್ಕೆ ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ.** **೧ X ೩ = ೩**

೭. ಅ) “ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ”

ಆ) “ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು ”

**೬. ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು, ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **೧ X ೩ = ೩**

೮. ಕುವೆಂಪು

**೭. ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎಂಟು–ಹತ್ತು ವಾಕ್ಯಗಳಲ್ಲಿ ವಿವರಿಸಿ.** **೧ X ೪ = ೪**

೯. ಅ) ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಆ) ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**೮. ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ.** **೧ X ೩ = ೩**

೧೦. ಏನು ಹೇಳೈ ಕರ್ಣಚಿತ್ತ

ಗ್ಲಾನಿಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿ ಕೊಂಬುದು ಸೇರದೇ ನಿನಗೆ

Downloaded from scoringtarget.com